ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ನಡೆದಿರುವ ಕಾರ್ಯಕ್ರಮಗಳ ಬಗ್ಗೆ

೧೨೦೫. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಹಿಳಾ ಹಾಗೂ ಶಿಶು ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದಿಂದ ಪ್ರತಿ ವರ್ಷ ಬೆಚ್ಚ ಮಾಡುತ್ತಿರುವ ಹಣಕಾಸಿನ ವಿವರವೇನು ?

ಆ) ರಾಜ್ಯ ಮಟ್ಟದಲ್ಲಿರುವ ಮಹಿಳಾ ಮಹಾ ಮಂಡಳಿಯಿಂದ ಮಹಿಳೆಯರ ಅಭಿವೃದ್ಧಿಗಾಗಿ ಮಾಡಬೇಕಾಗಿರುವ ಕಾರ್ಯಕ್ರಮದಲ್ಲಿ ಹಣಕಾಸಿನ ತೊಂದರೆ, ನಿಭಾಯಿಸಲು ಸರಕಾರವು ಹಾಕಿಕೊಂಡಿರುವ ಕಾರ್ಯಕ್ರಮವೇನು ?

ಇ) ಮಹಿಳಾ ಹಾಗೂ ಶಿಶು ಕಲ್ಯಾಣ ಇಲಾಖೆಗೆ ಮಹಿಳೆಯರಿಗಾಗಿ ಕಾರ್ಯಕ್ರಮದ ವ್ಯಾಪ್ತಿಯನ್ನು ನಿಗಧಿ ಸಮಯದಲ್ಲಿ ಕಾರ್ಯಾಚರಣೆಗೆ ತರಲು ಹಮ್ಮಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲಾಖೆಯ ಎಲ್ಲಾ ಕಾರ್ಯಕ್ರಮಗಳ ಬೆಚ್ಚದ ವಿವರ ಹೀಗಿದೆ :

೧೯೮೭-೮೮ರಲ್ಲಿ ಖರ್ಚು ಮಾಡಿದ ವಿವರ

ರಾಜ್ಯ (ಲಕ್ಷಗಳಲ್ಲಿ)		ಕೇಂದ್ರ (ಲಕ್ಷಗಳಲ್ಲಿ)
ಮಹಿಳಾ ಕಲ್ಯಾಣ	೨,೯೪೪-೩೩	೪-೯೦
ಶಿಶು ಕಲ್ಯಾಣ	೧,೦೭೮-೮೬	೭೯೭-೫೩
	೪,೦೨೩-೧೯	೮೦೧-೯೩

ಆ) ಮಹಿಳಾ ಮಂಡಲವು ಸೊಸೈಟಿ ಆಕ್ಟ್‌ನಲ್ಲಿ ನೊಂದಣಿಯಾಗಿರುವ ಸ್ವಯಂ ಸೇವಾ ಸಂಸ್ಥೆಯಾಗಿದ್ದು ಸರಕಾರದಿಂದ ಈಗ ಮಹಿಳೆಯರ ಅಭಿವೃದ್ಧಿಗಾಗಿ ಹಣಕಾಸಿನ ತೊಂದರೆ ನಿಭಾಯಿಸಲು ಯಾವುದೇ ಕಾರ್ಯ ಕ್ರಮ ಇರುವುದಿಲ್ಲ. ಮಹಿಳಾ ಅಭಿವೃದ್ಧಿ ನಿಗಮವನ್ನು ಸರಕಾರವೇ ಈಗ ಸ್ಥಾಪಿಸಿದ್ದು ಅದರ ಮೂಲಕ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸಿದ್ಧತೆ ನಡೆಯುತ್ತಿದೆ. ೭,೫೦೦-೦೦ ರೂ.ಗಳನ್ನು ಒಂದು ಮಹಿಳಾ ಒಕ್ಕೂಟಕ್ಕೆ ತರಬೇತಿಗೆ ಒಂದು ಸಾರಿ ಅನುದಾನ ಕೊಡಲಾಗುತ್ತಿದೆ.

ಇ) ಪ್ರತಿ ವರ್ಷ, ಗೃಹ ಕಲ್ಯಾಣ ತರಬೇತಿ ಮತ್ತು ಉತ್ಪಾದನಾ ಕೇಂದ್ರ ಯೋಜನೆ, ಮಹಿಳಾ ವಸತಿ ಗೃಹಗಳಿಗೆ ಕಟ್ಟಡದ ಸಹಾಯಧನ ಮಹಿಳೆಯರಿಗೆ ತರಬೇತಿ ಕೇಂದ್ರಗಳು ಮೊದಲಾದ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಆಯಾಯಾ ಕಾರ್ಯಕ್ರಮಗಳ ಯೋಜನೆಯಂತೆ ಸಂಬಂಧಪಟ್ಟ ಇಲಾಖೆಗೆ ಜಾರಿ ತರುತ್ತದೆ.

ಸುಳ್ಳು ಜಾತಿ ಸರ್ಟಿಫಿಕೇಟ್ ಕುರಿತು.

೧೩೮೫. ಶ್ರೀ ಗೋಪಾಲ ಮುಕುಂದ ಕಾನಡೆ (ಖಿರ್ಸಿ) —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಳು ಜಾತಿಯ ಸರ್ಟಿಫಿಕೇಟು ಪಡೆದುಕೊಂಡು ಇದುವರೆಗೆ ನೌಕರಿ ಮಾಡುವವರ ಸಂಖ್ಯೆ ಎಷ್ಟು, ಸರ್ಕಾರದವರಿಂ ಇದುವರೆಗೆ ಎಷ್ಟು ಜನರನ್ನು ಸುಳ್ಳು ಜಾತಿ ಸರ್ಟಿಫಿಕೇಟು ಪಡೆದವರನ್ನು ಗುರುತಿಸಿದ್ದೀರಿ, ಅವರ ಹೆಸರು, ಹುದ್ದೆ, ಊರು ವಿವರ ನೀಡುವುದು.

ಆ) ಇದುವರೆಗೆ ಸರಕಾರ ಎಷ್ಟು ಮಂದಿಯ ಮೇಲೆ ಸುಳ್ಳು ಜಾತಿ ಸರ್ಟಿಫಿಕೇಟುಗಳನ್ನು ಗುರುತಿಸಿ ಶಿಕ್ಷೆ ವಿಧಿಸಿದ್ದವರ ಹೆಸರು, ಹಾಗೂ ಇದರಿಂದ ಎಷ್ಟು ಹರಿಜನರಿಗೆ ಅನ್ಯಾಯ ಆಗಿದೆ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆ) ೫೨೧. ವಿವರಗಳುಳ್ಳ ಅನುಬಂಧವನ್ನು ಲಗತ್ತಿಸಿದೆ.

ಆ) ೩೩೪ ಪ್ರಕರಣಗಳಲ್ಲಿ ಸರಹದ್ದಿನ ಪೋಲೀಸ್ ಠಾಣೆಗಳಲ್ಲಿ ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ. ಈ ಪೈಕಿ ೫೮ ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿಗಳನ್ನು ನ್ಯಾಯಾಲಯಗಳಿಗೆ ಸಲ್ಲಿಸಲಾಗಿದೆ. ಇವುಗಳಲ್ಲಿ ಯಾವುದೆ ಪ್ರಕರಣವು ನ್ಯಾಯಾಲಯದಲ್ಲಿ ಶಿಕ್ಷೆಯಲ್ಲಿ ಅಂತ್ಯ ಗೊಂಡಿಲ್ಲ.

ಸ್ಥಿರಪಟ್ಟ ೫೨೧ ಪ್ರಕರಣಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ನಿಗಮಗಳಿಗೆ ಸಂಸ್ಥೆಗಳಿಗೆ ತಪ್ಪಿಸ್ಥರ ಮೇಲೆ ನಿಯಮಗಳಿಗನುಗುಣವಾಗಿ ತೆಗೆದು ಕೊಳ್ಳುವಂತೆ ತಿಳಿಸಲಾಗಿದ್ದು, ಅವುಗಳಲ್ಲಿ ಳ ಜನರ ಮೇಲೆ ಇಲಾಖಾ ಕ್ರಮವನ್ನು ತೆಗೆದುಕೊಂಡ ಬಗ್ಗೆ ವರದಿಯಾಗಿದೆ.

೫೨೧ ಹರಿಜನರಿಗೆ ಅನ್ಯಾಯವಾಗಿದಂತಾಗಿದೆ. ಆದರೆ ಇದು ನ್ಯಾಯಾಲಯಗಳ ತೀರ್ಪುಗಳ ಮೇಲೆ ಅವಲಂಬಿಕವಾಗಿದೆ.

ಮಂಗಳೂರು ತಾಲ್ಲೂಕಿನಲ್ಲಿ ಮಾಸಾಶನದ ಬಗ್ಗೆ

೧೨೩೪. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೫-೫೬, ೫೬-೫೭ರಲ್ಲಿ ವೃದ್ಧಾಪ್ಯ ವೇತನ ವಿಧವಾ ಮಾಸಾಶನ, ಅಂಗವಿಕಲರ ವೇತನವನ್ನು ಮಂಜೂರಾತಿಗಾಗಿ ಕೋರಿ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ, ಆ ಪೈಕಿ ೧೯೫೫-೫೬, ೫೬-೫೭ನೇ ಡಿಸೆಂಬರ್ ಅಂತ್ಯದವರೆಗೆ ಮಂಗಳೂರು ತಾಲ್ಲೂಕಿನಲ್ಲಿ ವಿಧವಾ ಮಾಸಾಶನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನಗಳನ್ನು ನೀಡಲಾಗಿರುವವರ ಸಂಖ್ಯೆ, (ಪ್ರತಿ ವರ್ಷಗಳ ಪ್ರತ್ಯೇಕ ವಿವರ ಒದಗಿಸುವುದು)

ಇ) ಸದರಿ ಅರ್ಜಿಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೮,೧೦೧ (ಮಂಗಳೂರು ತಾಲ್ಲೂಕಿನಲ್ಲಿ ಬಂದಿರುವ ಅರ್ಜಿಗಳು)

ಆ)

	ವೃದ್ಧಾಪ್ಯ ವೇತನ	ವಿಧವಾ ಮಾಸಾಶನ	ಅಂಗವಿಕಲ ವೇತನ
೧೯೫೫-೫೬	೬೪೫	೧೪೦೨	೩೦೨
೧೯೫೬-೫೭ನೇ ಡಿಸೆಂಬರ್ ಅಂತ್ಯದವರೆಗೆ	೯೯೩	೧೫೪೪	೪೭೯

ಇ)

ವೃದ್ಧಾಪ್ಯ ವೇತನ	ವಿಧವಾ ಮಾಸಾಶನ	ಅಂಗವಿಕಲ ವೇತನ
೧೬೬	೨೧೯	೯೭